ಸಾಕ್ಷಿಯನ್ನು ದಿಃ 03.03.2022 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ವಾದಿಗಳ ಪರ ಶ್ರೀ ಎಂ ಆರ್ ವಕೀಲರಿಂದಃ**

ನಮ್ಮ ವಂಶದ ಮೂಲ ಪುರುಷ ಕರಿಯಪ್ಪ ಎಂದರೆ ಸರಿ. ಕರಿಯಪ್ಪನ ಹೆಂಡತಿ ಹೆಸರು ದ್ಯಾವಜ್ಜಿ. ಕರಿಯಪ್ಪ ಹಾಗೂ ದ್ಯಾವಜ್ಜಿ ದಂಪತಿಗಳಿಗೆ 6 ಜನ ಮಕ್ಕಳು. ಅವರ ಹೆಸರು ಅಜ್ಜಪ್ಪ, ದೊಣ್ಣೆ ಓಬಜ್ಜ, ಮೇಕೆ ಚಿಕ್ಕಣ್ಣ, ಮೂಟೆ ಕರಿಯಣ್ಣ, ಸಣ್ಣ ಕರಿಯಣ್ಣ, ಕುರುಡು ಓಬಣ್ಣ. ಕರಿಯಪ್ಪನ ಮೊದಲನೇ ಮಗ ಅಜ್ಜಪ್ಪನ ಹೆಂಡತಿಯ ಹೆಸರು ಪಾತಮ್ಮ. ಅಜ್ಜಪ್ಪ ಹಾಗೂ ಪಾತಮ್ಮನಿಗೆ ಮಕ್ಕಳಿರಲಿಲ್ಲ. ದೊಣ್ಣೆ ಓಬಣ್ಣನಿಗೆ ಮದುವೆಯಾಗಿರಲಿಲ್ಲ. ಮೇಕೆ ಚಿಕ್ಕಣ್ಣನ ಹೆಂಡತಿ ಹೆಸರು ತ್ಯಾರಮ್ಮ. ಮೇಕೆ ಚಿಕ್ಕಣ್ಣ ಹಾಗೂ ತ್ಯಾರಮ್ಮನಿಗೆ ದಾಸಣ್ಣ ಎನ್ನುವ ಒಬ್ಬನೇ ಮಗನಿದ್ದಾನೆ. ನಾನೇ ದಾಸಣ್ಣನ ಹೆಂಡತಿ ಎಂದರೆ ಸರಿ. ನನಗೆ 3 ಜನ ಹೆಣ್ಣು ಹಾಗೂ 4 ಜನ ಗಂಡು ಮಕ್ಕಳು.

ನನ್ನ ಮಕ್ಕಳೇ ದಾವೆ ಹೂಡಿದ್ದಾರೆ ಎಂದರೆ ಸರಿ. ಸಣ್ಣ ಕರಿಯಪ್ಪನ ಹೆಂಡತಿ ಹೆಸರು ನಿಂಗಮ್ಮ. ಕುರುಡು ಓಬಣ್ಣ ಮೃತ ಪಟ್ಟಿದ್ದಾನೆ. ಮೂಟೆ ಕರಿಯಪ್ಪನ ಹೆಂಡತಿಯ ಹೆಸರು ಸಿದ್ದಮ್ಮ. ಅವರಿಗೆ ಮಕ್ಕಳಿರಲಿಲ್ಲ. ನಮ್ಮ ಕುಟುಂಬದ ಮೂಲ ಪುರುಷನನ್ನು ನಾನು ನೋಡಿಲ್ಲ. ಆದರೆ ಕರಿಯಪ್ಪನ ಹೆಂಡತಿ ದ್ಯಾವಮ್ಮನನ್ನು ನೋಡಿದ್ದೇನೆ. ಕರಿಯಪ್ಪ ಹಾಗೂ ದ್ಯಾವಮ್ಮ ಮೃತ ಪಟ್ಟಿದ್ದಾರೆ ಎಂದರೆ ಸರಿ.

ಕರಿಯಪ್ಪನ ಮೊದಲನೇ ಮಗ ಅಜ್ಜಪ್ಪ ಮೃತ ಪಟ್ಟು 50 ವರ್ಷಗಳು ಕಳೆದಿವೆ. ಅಜ್ಜಪ್ಪನ ಹೆಂಡತಿ ಮೃತ ಪಟ್ಟು 40 ವರ್ಷಗಳು ಕಳೆದಿವೆ. ಕರಿಯಪ್ಪನ ಮಗ ದೊಣ್ಣೆ ಓಬಣ್ಣ ಮೃತ ಪಟ್ಟು 60 ವರ್ಷಗಳು ಕಳೆದಿವೆ. ಮೇಕೆಚಿತ್ತಣ್ಣ ಮೃತ ಪಟ್ಟು 40 ವರ್ಷಗಳು ಕಳೆದಿವೆ. ಆತನ ಹೆಂಡತಿ ಮೃತ ಪಟ್ಟಿದ್ದಾಳೆ ಎಂದರೆ ಸರಿ. ಆಕೆ ಮೃತ ಪಟ್ಟು 60 ವರ್ಷಗಳು ಕಳೆದಿವೆ. ಸಣ್ಣ ಕರಿಯಪ್ಪ ಮೃತಪಟ್ಟು 30-35 ವರ್ಷಗಳು ಕಳೆದಿವೆ. ಸಣ್ಣ ಕರಿಯಪ್ಪನ ಹೆಂಡತಿ ನಿಂಗಮ್ಮ. ಆಕೆಗೆ ಕಣ್ಣು

ಕಾಣಿಸದಿದ್ದ ಕಾರಣ ಆಕೆಯನ್ನು ಕುರುಡು ನಿಂಗಮ್ಮ ಎಂದು ಕರೆಯುತ್ತಿದ್ದರು. ಆಕೆ ಮೃತ ಪಟ್ಟು 30-40 ವರ್ಷಗಳು ಕಳೆದಿವೆ. ಕುರುಡು ಓಬಣ್ಣ ಮೃತ ಪಟ್ಟು 50 ವರ್ಷಗಳು ಕಳೆದಿವೆ. ಮೂಟೆ ಕರಿಯಣ್ಣ ಮೃತ ಪಟ್ಟು 40 ವರ್ಷಗಳು ಕಳೆದಿವೆ. ಆತನ ಹೆಂಡತಿ ಸಿದ್ದಮ್ಮ ಮೃತ ಪಟ್ಟು 50 ವರ್ಷಗಳು ಕಳೆದಿವೆ.

(ಈ ಹಂತದಲ್ಲಿ ಸಾಕ್ಷಿಯ ಪಾಟೀ ಸವಾಲಿಗೆ ವಾದಿಗಳ ಪರ ವಕೀಲರು ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು).

ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಹಿರಿಯೂರು.